CC-36/2021
PW-5

ಸಾಕ್ಷಿಯನ್ನು ದಿನಾಂಕ 01-12-2025 ರಂದು ಸಾಕ್ಷಿಯನ್ನ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದಃ</u>

ಘಟನೆ ದಿನ ನಾನು ಜೇವರ್ಗಿಯಲ್ಲಿ ಗಸ್ತು ಕರ್ತವ್ಯದಲ್ಲಿದ್ದೆ. ಮಾಹಿತಿ ಬಂದ ನಂತರ ನಾನು ಕಚೇರಿಗೆ ಹೋಗಿ ನಂತರ ಸಿಬ್ಬಂದಿಗಳೊಂದಿಗೆ ಗುನ್ನೆ ಜಾಗಕ್ಕೆ ಹೋಗಿರುತ್ತೇನೆ. ಜಗಳಗಾ ಕ್ರಾಸಿಗೆ ಸೊನ್ನ ಮಾರ್ಗವಾಗಿ ಹೋಗಿರುತ್ತೇವೆ. ಸೊನ್ನ ಕ್ರಾಸನಲ್ಲಿ ಒಟ್ಟು 4 ರಸ್ತೆಗಳಿವೆ ಎಂದರೆ ಸರಿ. ಸೊನ್ನ ಕ್ರಾಸನಿಂದ ಜವಳಗಾ ಕ್ರಾಸಿಗೆ ಹೋಗಲು ಕಚ್ಚಾ ರಸ್ತೆ ಇದೆ ಎಂದರೆ ಸರಿ. ನಾವು ಜವಳಗಾ ಕ್ರಾಸಿಗೆ ಬೆಳಗಿನ ಜಾವ 3.20 ಗಂಟೆಗೆ ಹೋಗಿರುತ್ತೇನೆ. ನಾವು ಕೈ ಸನ್ನೆ ಮಾಡಿದಾಗ ನಾಲ್ಕು ಚಕ್ರದ ವಾಹನವು 30-40 ಕಿಮೀ ವೇಗದಲ್ಲಿ ಬರುತ್ತಿತ್ತು. ಘಟನಾ ಸ್ಥಳದ ಪೂರ್ವಕ್ಕೆ ಜೇವರ್ಗಿ ಮುಖ್ಯ ರಸ್ತೆ, ಪಶ್ಚಿಮಕ್ಕೆ ಸೊನ್ನ ರಸ್ತೆ, ಉತ್ತರಕ್ಕೆ ಕಲ್ಲಹಂಗರಗಾ ರಸ್ತೆ, ದಕ್ಷಿಣಕ್ಕೆ ಜವಳಗಾ ರಸ್ತೆ ಇದೆ. ಘಟನೆ ದಿನ ಘಟನಾ ಸ್ಥಳದ ಸುತ್ತಮುತ್ತಲಿನ ರೈತರು ತಮ್ಮ ಜಮೀನುಗಳಿಗೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತನ ವಾಹನವನ್ನು ಜಪ್ತಿಪಡಿಸಿಕೊಂಡ ನಂತರ ನಮ್ಮ ಇಲಾಖೆ ಸಿಬ್ಬಂದಿ ಮುಖಾಂತರ ಕಚೇರಿಗೆ ತೆಗೆದುಕೊಂಡು ಬಂದಿರುತ್ತಾರೆ. ಈ ಕುರಿತು ನನ್ನ ಫಿರ್ಯಾದಿಯಲ್ಲಿ ನಮೂದಿಸಿಲ್ಲ. ಆರೋಪಿಗೂ ಹಾಗೂ ವಶಪಡಿಸಿಕೊಂಡ ವಾಹನಕ್ಕೂ ಯಾವುದೆ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿತನಿಂದ ವಶಪಡಿಸಿಕೊಂಡ ಬಾಕ್ಸಗಳು ಕಂದು ಬಣ್ಣದ್ದಿರುತ್ತವೆ. ಫಿರ್ಯಾದಿ ನೀಡಿದ ಸಮಯದಲ್ಲಿ ಲಾಕಡೌನ ಇತ್ತು ಎಂದರೆ ಸರಿ. ಆದರೆ ಆ ದಿನ ಆರೋಪಿತನು ಅಕ್ರಮವಾಗಿ ಮದ್ಯ ಸಾಗಾಟ ಮಾಡುತ್ತಿದ್ದ ಎಂದು ಹೇಳುತ್ತಾರೆ. ಪಂಚರು ನಿಮ್ಮ ಇಲಾಖೆ ಸಿಬ್ಬಂದಿಗಳಿರುತ್ತಾರೆ ಎಂದರೆ ಸರಿ. ಸಾಕ್ಷಿ ಲಾಕಡೌನ ಇದ್ದ ಕಾರಣ ಜನರು ಪಂಚರಾಗಲು ಒಪ್ಪದ ಕಾರಣ ನಮ್ಮ ಸಿಬ್ಬಂದಿಯವರನು ಪಂಚರನ್ನಾಗಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಆರೋಪಿತನು ಆ ದಿನ ಅನಧಿಕೃತವಾಗಿ ಮದ್ಯ ಸಾಗಾಟ ಮಾಡುತ್ತಿದ್ದ ನಮ್ಮನ್ನು ನೋಡಿ ಓಡಿ ಹೋದ ಎಂದು ಸುಳ್ಳು ಹೇಳ್ತತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿ ಮುದ್ದೆಮಾಲಗಳನ್ನು ಜಪ್ತಿಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗದೆ ಠಾಣೆಯಲ್ಲೆ ಕುಳಿತು ಪಂಚನಾಮೆ ತಯಾರಿಸಿ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅಂಕಿ

ಅಂಶಗಳಿಗೊಸ್ಕರ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿತನ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ